ದಯವಿಟ್ಟು ನಿಮ್ಮವರಿಗೆ ತಿಳಿಸಿ ಹೇಳಿ..... ಬಂಗಾರಪ್ಪನವರು, ಖರ್ಗೆಯವರು... ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ ಹೋಗಿ ಕುಳಿತುಕೊಳ್ಳಬೇಕು...

(ಗೊಂದಲ)

ಶ್ರೀವಿ. ಲಕ್ಷ್ಮೀಸಾಗರ್.—ನಾನು ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ..... ಇದು ಸರಿಯಾದ ರೀತಿಯಲ್ಲ..... ಮಾನ್ಯ ವಿರೋಧ ಪಕ್ಷದ ಸದಸ್ಯರಿಗೂ ಸಾಕಷ್ಟು ಅವಕಾಶಗಳು ಇವೆ, ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಿ.....

(ಗೊಂದಲ)

ಶ್ರೀ ಬಿ. ಎಸ್. ಕ್ಯಡಿಯೂರಪ್ಪ.—ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ.

(ಗೊಂದಲ)

(ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸಿ.ಬಿ.ಐ. ತನಿಖೆ ಆಗಲೇ ಬೇಕು ಎಂದು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು. ಈಗ ಪ್ರಶ್ನೋತ್ತರ ವೇಳೆ. ಶ್ರೀ ಟಿ. ಎಸ್. ಮಣಿಯವರು ತಮ್ಮ ಪ್ರಶ್ನೆಯನ್ನು ಕೇಳಿ.

(ಗೊಂದಲ)

ಅಧ್ಯಕ್ಷರು.—ಶ್ರೀ ಬಿ. ಜಿ. ಜವಳಿಯವರು ತಮ್ಮ ಪ್ರಶ್ನೆಯನ್ನು ಕೇಳಿ... ದಯವಾಡಿ ಮಾನ್ಯ ಸದಸ್ಯರುಗಳ ಪ್ರಶ್ನೆಗೆ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ...

(ಗೊಂದಲ)

ಅಧ್ಯಕ್ಷರು.—ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ಹಾಕಿದ್ದೇನೆ.

(ಸದನವು ೯-೩೦ ಗಂಟೆಯಿಂದ ಹತ್ತು ನಿಮಿಷಗಳ ಅವಧಿಗೆ ಮುಂದಕ್ಕೆ ಹಾಕಲ್ಪಟ್ಟಿತು)

(ಸದನವು ಮತ್ತೆ ೧೦-೪೩ ಗಂಟೆಗೆ ಸಮಾವೇಶಗೊಂಡಿತು)

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

(Congress (I) members were standing in the well shouting slogans..... "We want CBI enquiry" we want CBI enpuiry)

ಅಧ್ಯಕ್ಷರು,—ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಗೊಂದಲ)

ಶ್ರೀ ಬಿ. ರಾಜುಗೌಡ.—ವಿ. ಪಾಂಟ್ ಸಿ.ಬಿ.ಐ. ಎನ್‌ಕ್ವೈರಿ

MR. SPEAKER.—in view of the disorder in the House I have suspended the business except the discussion on motion of thanks to the Governor's Address and reply by the Government.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.—ದಯವಿಟ್ಟು ಗೌರ್ನರ್ ಆಡ್ರೆಸ್‌ಮೇಲೆ ಯಾರಾದರೂ ಮಾತನಾಡುವವರಿದ್ದರೆ ಮಾತನಾಡಿ. ಗೌರ್ನರ್ ಆಡ್ರೆಸ್ ಮೇಲೆ ಮಾತನಾಡುವುದಕ್ಕೆ ನಾನು ಅವಕಾಶವನ್ನು ಕೊಟ್ಟಿದ್ದೇನೆ, ಮಾತನಾಡಿ. ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಕೂತುಕೊಳ್ಳಿ. ಈಗ ಯಾರೂ ಮಾತನಾಡದಿದ್ದರೆ ಗೌರ್ನರ್ ಆಡ್ರೆಸ್‌ಮೇಲೆ ಉತ್ತರ ಕೊಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆಯುತ್ತೇನೆ.....

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ (ಐ) ಪಕ್ಷದ ಎಲ್ಲ ಸದಸ್ಯರೂ ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಯವರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಉತ್ತರವನ್ನು ನೀಡುತ್ತಾರೆ. ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

(ಧರಣಿ ಕುಳಿತ ಸದಸ್ಯರು ಅಲ್ಲೇ ಕುಳಿತು ಘೋಷಣೆಗಳನ್ನು ಕೂಗುತ್ತಿದ್ದರು.)

ಶ್ರೀ ಆರ್. ವೆಂಕಟರಾಮಯ್ಯ.—ನೀವು ಯಾವುದಾದರೂ ಒಂದು ಎನ್‌ಕ್ವೈರಿಗೆ ಒಪ್ಪಿಕೊಳ್ಳಿ, ಇಲ್ಲದಿದ್ದರೆ ನಾವೂ ಕೂಡ ವಾಕೌಟ್ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಸಿ.ಬಿ.ಐ, ಎನ್‌ಕ್ವೈರಿ ಮಾಡದಿದ್ದಲ್ಲಿ ಯಾವುದಾದರೂ ಎನ್‌ಕ್ವೈರಿ ಮಾಡಿಸಿ. ಜ್ಯುಡಿಷಿಯಲ್ ಎನ್‌ಕ್ವೈರಿಯಾದರೂ ಮಾಡಿಸಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.....

(ಗೊಂದಲ)

(ಈ ಸಂದರ್ಭದಲ್ಲಿ ಸಿ.ಬಿ. ಐ. ಮತ್ತು ಸಿ.ಪಿ.ಐ ಸದಸ್ಯರಾದ ಮಾನ್ಯ ಆರ್. ವೆಂಕಟರಾಮಯ್ಯ, ಮಾನ್ಯ ಟಿ. ಎಸ್. ಮಣಿ ಮತ್ತು ಮಾನ್ಯ ಎಂ. ಎಸ್ ಕೃಷ್ಣನ್ ರವರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಎಸ್. ಆರ್. ಬೊಮ್ಮಾಯಿ.—ಸಂಸದೀಯ ಸತ್ಸಂಪ್ರದಾಯಗಳನ್ನು ತಾವು ಕಾಯಬೇಕಾಗಿ ಮತ್ತೊಮ್ಮೆ ನಿಮ್ಮಲ್ಲಿ ಅತ್ಯಂತ ವಿನಯದಿಂದ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ,

(ಮಾನ್ಯ ಕಾಂಗ್ರೆಸ್ (ಐ) ಸದಸ್ಯರು ಬೇಕೇ ಬೇಕು ಸಿ.ಬಿ.ಐ. ಎನ್‌ಕ್ವೈರಿ, ಉತ್ತರ ಬೇಕಾಗಿಲ್ಲ ಎಂದು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳೆ, ತಾವು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಉತ್ತರವನ್ನು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಧ್ಯೇಯ ಧೋರಣೆಗಳನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಇಲ್ಲಿ ಮಾನ್ಯ ಸದಸ್ಯರು ಅದಕ್ಕೆಲ್ಲಾ ಉತ್ತರಗಳನ್ನು ಬಯಸುವುದಿಲ್ಲ. ಆದ್ದರಿಂದ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಅಭಿನಂದನಾ ನಿರ್ಣಯದ ಪ್ರಸ್ತಾವನೆಯನ್ನು ಮುಂತಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಈಗ **ಮಾನ್ಯ ರಾಜ್ಯಪಾಲರ** ಭಾಷಣದ ವಂದನಾ ನಿರ್ಣಯವನ್ನು ಮಂಡಿಸಿ ಹಾಕುತ್ತೇನೆ. ಪ್ರಸ್ತಾವ ಹೀಗಿದೆ —

"ಫೆಬ್ರುವರಿ ೧೫ನೇ. ೧೯೮೯ರಿಂದ ವಿಧಾನ ಮಂಡಲದ ಸದಸ್ಯರನ್ನುದ್ದೇಶಿ ದಯಪಾಲಿಸಿದ ಭಾಷಣಕ್ಕಾಗಿ ಈ **ಅಧಿವೇಶನದಲ್ಲಿ** ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು **ಮಾನ್ಯ** ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ."

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

ಈ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

(ಗೊಂದಲ)

ಅಧ್ಯಕ್ಷರು.—ಈಗ ಸಭೆಯನ್ನು ಅನಿರ್ಧಿಷ್ಟಕಾಲದವರೆಗೆ ಮುಂದೂಡಿದ್ದೇನೆ.

(ಸದನವು **ಬೆಳಿಗ್ಗೆ** ೧೧ಗಂಟೆ ೪೭ ನಿಮಿಷಕ್ಕೆ ಅನಿರ್ಧಿಷ್ಟಕಾಲದವರೆಗೆ ಮುಕ್ತಾಯವಾಯಿತು)